ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :—

1) ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು 10,42,316 ಜಾನುವಾರುಗಳು ಇರುತ್ತವೆ ಮತ್ತು ದಾವಣಗೆರೆ ಜಿಲ್ಲೆಯಲ್ಲಿ ಒಟ್ಟು 10,22,002 ಜಾನುವಾರುಗಳು ಇರುತ್ತವೆ.

ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು 155 ಪಶುವೈದ್ಯಕೀಯ ಸಂಸ್ಥೆಗಳು ಇರುತ್ತವೆ ಮತ್ತು ದಾವಣಗೆರೆ ಜಿಲ್ಲೆಯಲ್ಲಿ ಒಟ್ಟು 163 ಪಶುವೈದ್ಯಕೀಯ ಸಂಸ್ಥೆಗಳು ಇರುತ್ತವೆ.

2) ರೂ.74.76 ಲಕ್ಷ ಹಣವನ್ನು ಶಿವಮೊಗ್ಗ ಜಿಲ್ಲೆಗೆ ಹಾಗೂ ರೂ. 62.66 ಲಕ್ಷ ಹಣವನ್ನು ದಾವಣಗೆರೆ ಜಿಲ್ಲೆಗೆ 2001-02ನೇ ಸಾಲಿನಲ್ಲಿ ಒದಗಿಸಲಾಗಿದೆ.

ಬ್ಯಾಕ್‌ಲಾಗ್ ಹುದ್ದೆಗಳನ್ನು ಶೇಕಡಾವಾರು ನಿಗಧಿ ಮಾಡುವ ವಿಚಾರ.

1248(1190)ಶ್ರೀ ಕರಿಯಣ್ಣ (ಹೊಳೆಹೊನ್ನೂರು) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪರಿಶಿಷ್ಟ ಜಾತಿ : ವರ್ಗದವರಿಗೆ ಸರ್ವೋಚ್ಚ ನ್ಯಾಯಾಲಯದ ತೀರ್ಮಾನದಂತೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಕರೆದಿರುವುದು ಸರಿಯಷ್ಟೆ; ಇದನ್ನು ಯಾವ ನಿಯಮದಡಿ ಶೇಕಡಾವಾರು ಪ್ರಮಾಣದಲ್ಲಿ ಕರೆಯಲಾಗಿದೆ?

ಆ) ರಾಜ್ಯಾಂಗದಲ್ಲಿ ಕನಿಷ್ಠ ಶೇಕಡ 18ಗೆ ಕಡಿಮೆ ಇಲ್ಲದೆ ಇವರ ಜನಸಂಖ್ಯೆಯ ಆಧಾರದ ಮೇಲೆ ಮೀಸಲಾತಿಯ ಬ್ಯಾಕ್‌ಲಾಗ್ ಹುದ್ದೆಗಳನ್ನು ನಿಗಧಿ ಮಾಡಬೇಕು ನಿಯಮವಿದ್ದು ಇದರಂತೆ ಈ ರಾಜ್ಯದಲ್ಲಿ ಶೇಕಡ 23.5 ಈ ಜನಸಂಖ್ಯೆ ಇದ್ದು ಅದರ ಆಧಾರದ ಮೇಲೆ ಈ ಹುದ್ದೆಗಳನ್ನು ನಿಗಧಿಮಾಡಿ ನೇಮಕಾತಿಗೆ ಕರೆಯಲಾಗಿದೆಯೇ? (ವಿವರ ನೀಡುವುದು)

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ಇಲ್ಲ

ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಆಸುಇ, 13 ಎಸ್‌ಬಿಸಿ 2001, ದಿನಾಂಕ 21.11.2001(ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳವರಿಗೆ ಮೀಸಲಿಟ್ಟು ತುಂಬದ ರಿಕ್ತ ಹುದ್ದೆಗಳು) (ವಿಶೇಷ ನೇಮಕಾತಿ) ನಿಯಮಗಳು 2001ರನ್ವಯ ತೆರೆದಿರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಪರಿಶೀಲಿಸುತ್ತಿದ್ದು, ಈ ಹುದ್ದೆಗಳನ್ನು ತುಂಬಲು ಪ್ರಸ್ತುತ ಜಾರಿಯಲ್ಲಿರುವಂತೆ, ಪರಿಶಿಷ್ಟ ಜಾತಿಯವರಿಗೆ ಶೇಕಡ 15 ಹಾಗೂ ಪರಿಶಿಷ್ಟ ವರ್ಗದವರಿಗೆ ಶೇಕಡ 3ರ ಶೇಕಡಾವಾರು ಮೀಸಲಾತಿಯನ್ನು ಸರ್ಕಾರ ನಿಗಧಿಪಡಿಸಿದೆ. ಮೇಲೆ ತಿಳಿಸಿದ ಸರ್ಕಾರಿ ಆದೇಶದ ಉಪಲಬ್ಧಗಳನ್ವಯ ತುಂಬಲಾಗದ ಬ್ಯಾಕ್‌ಲಾಗ್ ಹುದ್ದೆಗಳ ಪ್ರಮಾಣವನ್ನು ಲೆಕ್ಕ ಹಾಕಲಾಗುತ್ತಿದೆ.

ಆ) ಇಲ್ಲ.